# ಪ್ರಧಾನ ಸಿವಿಲ್ ನ್ಯಾಯಾದೀಶರು, ಜೆ.ಎಮ್.ಎಫ್. ಸಿ–2 ರಾಯಚೂರು

**ಸಿ.ಸಿ.ನಂ. 4317/2022**

**ಪಿ.ಡಬ್ಲ್ಯೂ: 1**
**ಸಿ.ಡಬ್ಲ್ಯೂ: 3**

ಸಾಕ್ಷಿದಾರರ ಹೆಸರು : ನವೀನ್ ಕುಮಾರ್

ತಂದೆಯ ಹೆಸರು : ತಿಮ್ಮನಗೌಡ

ವಯಸ್ಸು : 40 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ರಾಯಚೂರು.

ಇಂದು ದಿ:21–03–2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನನಗೆ ಚಾಸಾ 2 ರವರ ಪರಿಚಯವಿಲ್ಲ. ನನಗೆ ಆರೋಪಿತರು ಪರಿಚಯವಿಲ್ಲ. ಈಗ ಸಾಕ್ಷಿಗೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಮತ್ತು ಅದರ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಿರುವುದರಿಂದ, ಸದರಿ ಪಂಚನಾಮೆಯನ್ನು ನಿ:ಪಿ–1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ:ಪಿ–1(ಎ) ಎಂದು ಗುರುತಿಸಲಾಯಿತು. ನಿ:ಪಿ–1 ಕ್ಕೆ ನಾನು ಪೋ.ಠಾ. ಯಲ್ಲಿ ಸಹಿ ಮಾಡಿರುತ್ತೇನೆ. ನನಗೆ ನಿ:ಪಿ–1 ರ ಒಳಾಂಶಗಳ ಬಗ್ಗೆ ಮಾಹಿತಿ ಇಲ್ಲ. ಪೊಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ಜಪ್ತಿ ಪಂಚನಾಮೆ ಮಾಡಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿ: 04–04–2020 ರಂದು ಮದ್ಯಾಹ್ನ 03–30 ರಿಂದ 04–40 ಗಂಟೆಯವರೆಗೆ ನನ್ನ ಮತ್ತು ಚಾಸಾ–2 ರವರ ಸಮಕ್ಷಮ ನಿ:ಪಿ–1 ರಂತೆ ಸ್ಥಳದ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ 2. ಕೆ.ಜಿ. 500 ಗ್ರಾಂ. ಸಿಹೆಚ್. ಪೌಡರ್, 1 ಕೆ.ಜಿ. ಸ್ಯಾಕ್ರೀನ್, 1 ಕೆ.ಜಿ. ಸಿಟ್ರಿಕ್ ಅಸಿಡ್. 15 ಸಾಮಾರ್ಥ್ಯ 2 ಕೊಡದಲ್ಲಿ 30 ಲೀ. ಸೇಂದಿಯನ್ನು ಆರೋಪಿತರ ಕಡೆಯಿಂದ

ನನ್ನ ಮತ್ತು ಚಾ.ಸ.2.ರವರ ಸಮಕ್ಷಮ ಪೊಲೀಸರು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜಪ್ತಿ ಪಡಿಸಿಕೊಂಡ ವಸ್ತುಗಳಿಂದ 500 ಗ್ರಾಂ. ಸಿಹೆಚ್. ಪೌಡರ್, 300 ಗ್ರಾಂ. ಸಾಕ್ರಿನ್ 300 ಸಿಟ್ರಿಕ್ ಆಸೀಡ್ ಮತ್ತು 1 ಲೀ. ಸಾಮಾರ್ಥ್ಯದ ಒಂದು ಪ್ಲಾಸ್ಟಿಕ್ ಬಾಟಲಿನಲ್ಲಿ 1 ಲೀ. ಸೇಂದಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿರುವ ಎಲ್ಲ ಒಳಾಂಶಗಳು ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಜೆ.ಎಂ.ಎಫ್.ಸಿ.2, ರಾಯಚೂರು